## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಮಂಜುನಾಥ್ ಭಂಡಾರಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 852**

**ಉತ್ತರಿಸಬೇಕಾದ ದಿನಾಂಕ : 20.09.2022**

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಹಕಾರಿ ಸಂಸ್ಥೆಗಳಲ್ಲಿ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಹಣಕಾಸಿನ ವ್ಯವಹಾರಗಳ ನಿರ್ವಹಣೆಯನ್ನು ಯಾವ ನಿಯಮಗಳನ್ವಯ ಮಾಡಲಾಗುತ್ತಿದೆಯೇ, ಕೆವೈಸಿ ಇಂಧೀಕರಣ ಮಾಡಲಾಗುತ್ತಿದೆಯೇ; ಸಾಲವನ್ನು ನೀಡಲು ಅನುಸರಿಸುತ್ತಿರುವ ಮಾನದಂಡಗಳು ಯಾವುವು, ಸಿಬಿಲ್ ವರದಿಯನ್ನು ಪರಿಗಣಿಸಲಾಗುತ್ತಿದೆಯೇ, ಸಹಕಾರ ಬ್ಯಾಂಕುಗಳ ಅನುತ್ಪಾದಕ ಸಾಲದ ಪ್ರಮಾಣ ಎಷ್ಟು, ವಾರ್ಷಿಕ ಲೆಕ್ಕಪರಿಶೋಧನೆ ಸಂಸ್ಥೆಯನ್ನು/ಏಜೆನ್ಸಿ ಯಾವ ರೀತಿಯಲ್ಲಿ ಯಾರು ನಿರ್ಧರಿಸುತ್ತಾರೆ? (ಸಮಗ್ರ ವಿವರ ನೀಡುವುದು) | ಸಹಕಾರ ಸಂಘಗಳ ಕಾಯ್ದೆ 1959 ಮತ್ತು ನಿಯಮಗಳು 1960 ರನ್ವಯ ನೊಂದಾಯಿಸಲ್ಪಟ್ಟ ಎಲ್ಲಾ ರೀತಿಯ ಸಹಕಾರ ಸಂಘಗಳಲ್ಲಿ ಹಣಕಾಸಿನ ವ್ಯವಹಾರಗಳನ್ನು ಆಯಾ ಸಂಘಗಳ ಅನುಮೋದಿತ ಉಪವಿಧಿಗಳನ್ವಯ ಮತ್ತು ಅನುಮೋದಿತ ಠೇವಣಿ ಸಾಲಗಳ ಒಳನಿಯಮಗಳನ್ವಯ ನಡೆಸಲಾಗುತ್ತದೆ ಹಾಗೂ ಸಹಕಾರ ಬ್ಯಾಂಕುಗಳಲ್ಲಿ ಮೇಲ್ಕಂಡ ಅಂಶಗಳನ್ನು ಸೇರಿದಂತೆ ಭಾರತೀಯ ರಿಸರ್ವ್ ಬ್ಯಾಂಕಿನ ನಿಬಂಧನೆಗಳಿಗೆ ಒಳಪಟ್ಟು ಹಣಕಾಸಿನ ವ್ಯವಹಾರಗಳನ್ನು ನಡೆಸಲಾಗುತ್ತದೆ.<br><br>ಸಹಕಾರ ಸಂಘಗಳಲ್ಲಿ ಕಡ್ಡಾಯವಾಗಿ ಕೆವೈಸಿ ನಿಯಮಗಳನ್ನು ಮತ್ತು ಸಿಬಿಲ್ ವರದಿಯನ್ನು ಅನುಸರಿಸುತ್ತಿರುವುದಿಲ್ಲ.<br><br>ಸಹಕಾರ ಬ್ಯಾಂಕುಗಳಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಾವಳಿಗಳನ್ವಯ ಕೆವೈಸಿ ಇಂಧೀಕರಣ ಅನುಸರಿಸಲಾಗುತ್ತಿದೆ. ಸಾಲ ನೀಡಿಕೆಯಲ್ಲಿ ಆಯಾಯ ಸಹಕಾರ ಸಂಘಗಳು ಅನುಮೋದಿತ ಸಾಲಗಳ ಒಳನಿಯಮಗಳು ಹಾಗೂ ಉಪವಿಧಿಗಳನ್ವಯ ಸಾಲ ನೀಡುತ್ತಿರುತ್ತವೆ. ಆದರೆ ಸಹಕಾರ ಬ್ಯಾಂಕುಗಳು ಸಾಲ ನೀಡುವ ಸಂದರ್ಭದಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ನಿಯಮಗಳು ಮತ್ತು ಮಾರ್ಗಸೂಚಿ ಹಾಗೂ ಸಾಲಗಳ ಒಳನಿಯಮಗಳನ್ವಯ ಇರುವ ಮಾನದಂಡಗಳನ್ನು ಅನುಸರಿಸಿ ಸಾಲ ನೀಡಲಾಗುತ್ತಿದೆ. ಸಾಲ ನೀಡುವಿಕೆಯಲ್ಲಿ ಭಾರತೀಯ ರಿಸರ್ವ್ ಬ್ಯಾಂಕಿನ ಪರವಾಗಿ ಪಡೆದಿರುವ ಸಹಕಾರ ಬ್ಯಾಂಕುಗಳು ಸಿಬಿಲ್ ವರದಿಯನ್ನು ಪರಿಗಣಿಸುತ್ತವೆ.<br><br>ಭಾರತೀಯ ರಿಸರ್ವ್ ಬ್ಯಾಂಕಿನ ಮಾರ್ಗಸೂಚಿ ಮತ್ತು ನಿಯಮಗಳನ್ವಯ ಸಹಕಾರ ಬ್ಯಾಂಕುಗಳು ಅನುತ್ಪಾದಕ ಆಸ್ತಿಯ ಪ್ರಮಾಣವನ್ನು ನಿರ್ಧರಿಸಲಾಗುತ್ತದೆ. ಸದರಿ ಪ್ರಮಾಣವು ಬ್ಯಾಂಕಿನ ವಸೂಲಾತಿಗೆ ಅನುಗುಣವಾಗಿ ವಿಭಿನ್ನವಾಗಿರುತ್ತದೆ.<br><br>ಸಹಕಾರ ಸಂಘಗಳು/ಬ್ಯಾಂಕುಗಳು ಲೆಕ್ಕಪರಿಶೋಧನೆಯನ್ನು ಅವುಗಳ ವಹಿವಾಟಿಗೆ ಅನುಗುಣವಾಗಿ ಶಾಸನಬದ್ಧ ಲೆಕ್ಕಪರಿಶೋಧಕರಿಂದ (Statutory Auditor) ನಡೆಸಲಾಗುತ್ತಿದೆ. ಸಹಕಾರ ಸಂಘ/ಬ್ಯಾಂಕುಗಳು ತನ್ನ ಮುಂದಿನ ಆರ್ಥಿಕ ವರ್ಷದ ಲೆಕ್ಕ ಪರಿಶೋಧನೆಯನ್ನು ನಡೆಸಲು ಲೆಕ್ಕಪರಿಶೋಧಕರನ್ನು ನೇಮಿಸಿಕೊಳ್ಳಲು ಆಯಾಯ ಸಂಘ/ಬ್ಯಾಂಕಿನ ಸರ್ವ ಸದಸ್ಯರ ಸಭೆಗೆ |

| | | |
|---|---|---|
| | | ಅಧಿಕಾರ ನೀಡಲಾಗಿದೆ. ಸರ್ವ ಸದಸ್ಯರ ಸಭೆಯಲ್ಲಿ ನೇಮಕಗೊಂಡ ಲೆಕ್ಕಪರಿಶೋಧಕರು ಲೆಕ್ಕಪರಿಶೋಧನೆ ನಡೆಸುವ ಜವಾಬ್ದಾರಿ ಹೊಂದಿರುತ್ತಾರೆ. |
| ಆ) | ಸಹಕಾರಿ ಬ್ಯಾಂಕ್‌ಗಳಲ್ಲಿ ಠೇವಣಿ ಇಡುವ ಬಗ್ಗೆ ಇರುವ ನಿಯಮಗಳೇನು; ಜನಸಾಮಾನ್ಯರಿಗೆ ಮತ್ತು ಸದಸ್ಯರಿಗೆ ಠೇವಣಿ ಮಿತಿಯಿದೆಯೇ; ಠೇವಣಿ ಮಿತಿ ಆದಾಯ ಮಿತಿಯನ್ನು ದಾಟಿದಲ್ಲಿ ಸ್ವಯಂ ಪ್ರೇರಿತವಾಗಿ ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವ ವ್ಯವಸ್ಥೆ ಇದೆಯೇ(ವಿವರ ನೀಡುವುದು) | ಸಹಕಾರ ಬ್ಯಾಂಕುಗಳಲ್ಲಿ ಠೇವಣಿ ಇರಿಸಲು ಆಯಾ ಸಹಕಾರ ಬ್ಯಾಂಕಿನ ಅನುಮೋದಿತ ಉಪವಿಧಿಗಳು, ಠೇವಣಿ ಒಳನಿಯಮಗಳು ಮತ್ತು ಭಾರತೀಯ ರಿಸರ್ವ್ ಬ್ಯಾಂಕಿನ ನಿಬಂಧನೆಗೊಳಪಟ್ಟು ಠವಣಿಗಳನ್ನು ಸ್ವೀಕರಿಸಲು ಅವಕಾಶವಿರುತ್ತದೆ.<br>ಠೇವಣಿ ಮೊತ್ತ ಆದಾಯ ಮಿತಿಯನ್ನು ದಾಟಿದಲ್ಲಿ ಸ್ವಯಂ ಪ್ರೇರಿತವಾಗಿ ಆದಾಯ ತೆರಿಗೆ ವ್ಯಾಪ್ತಿಗೆ ಒಳಪಡುವ ವ್ಯವಸ್ಥೆ ಇರುತ್ತದೆ. |
| ಇ) | ಸಹಕಾರ ಸಂಸ್ಥೆಗಳಲ್ಲಿ ಮತ್ತು ಸಹಕಾರಿ ಬ್ಯಾಂಕುಗಳಲ್ಲಿ ಇರುವ ಸಿಬ್ಬಂದಿಗಳಿಗೆ ವೇತನ ಶ್ರೇಣಿ ಇದೆಯೇ; ಇಲ್ಲದಿದ್ದಲ್ಲಿ ಯಾವ ಆಧಾರದಲ್ಲಿ ವೇತನ ಪಾವತಿ ಮಾಡಲಾಗುತ್ತಿದೆ ಸದರಿ ಸಿಬ್ಬಂದಿಗಳಿಗೆ ಸೇವಾ ಭದ್ರತೆ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | ಸಹಕಾರ ಸಂಸ್ಥೆಗಳಲ್ಲಿ ಇರುವ ಸಿಬ್ಬಂದಿಗಳಿಗೆ ಕರ್ನಾಟಕ ಸಹಕಾರ ಸಂಘಗಳ ನಿಯಮ 1960ರ ನಿಯಮ 17ರಂತೆ ವೇತನ ಶ್ರೇಣಿ ನಿಗಧಿಪಡಿಸಲು ಸಂಘಗಳ ಆಡಳಿತ ಮಂಡಲಿಗೆ ಅವಕಾಶವಿರುತ್ತದೆ. ಆದರೆ ಸಿಬ್ಬಂದಿ ವೆಚ್ಚವು ಹಿಂದಿನ ಆರ್ಥಿಕ ವರ್ಷದಲ್ಲಿನ ದುಡಿಯುವ ಬಂಡವಾಳದ ಶೇ.2ನ್ನು ಮೀರಿದ್ದಲ್ಲಿ ಹಾಗೂ ಕ್ರೋಢೀಕೃತ ನಷ್ಟ ಅನುಭವಿಸುತ್ತಿರುವ ಸಂಘಗಳಲ್ಲಿ ಇಲಾಖಾ ಅನುಮತಿ ಪಡೆಯಬೇಕಾಗುತ್ತದೆ.<br>ಸಹಕಾರ ಸಂಸ್ಥೆಗಳ/ಬ್ಯಾಂಕುಗಳ ಸಿಬ್ಬಂದಿಗೆ ಸೇವಾ ಭದ್ರತೆ ಮತ್ತು ಸಾಮಾಜಿಕ ಭದ್ರತೆ ಒದಗಿಸುವ ಜವಾಬ್ದಾರಿ ಸಹಕಾರ ಸಂಘ/ಬ್ಯಾಂಕಿನ ಆಡಳಿತ ಮಂಡಳಿಯ ಜವಾಬ್ದಾರಿಯಾಗಿರುತ್ತದೆ. |

ಕಡತ ಸಂಖ್ಯೆ: ಸಿಒ 108 ಸಿಆರ್‌ಸಿ 2022

(ಎಸ್. ಟಿ. ಸೋಮಶೇಖರ್)
ಸಹಕಾರ ಸಚಿವರು.